**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 06.06.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ: ವಾದಿ ಪರ ಶ್ರೀ ಎಂ ಎಸ್ ಎಂ ವಕೀಲರಿಂದ**

| | |
|---|---|
| ನಿಪಿ **6** | ಹಕ್ಕು ಬದಲಾವಣೆ ಆದೇ ಸಂಖ್ಯೆ 441 ರ ಆದೇಶದ ನಕಲು ಪ್ರತಿ |
| ನಿಪಿ **7** ರಿಂದ **18** | 12 ದಾವಾ ಆಸ್ತಿಗೆ ಸಂಬಂಧಪಟ್ಟಂತಹ ಪಹಣಿ ಪತ್ರಿಕೆಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಕ್ರಮವಾಗಿ |

**ಪಾಟೀ ಸವಾಲುಃ ಪ್ರತಿವಾದಿ 1 ರವರ ಪರ ಶ್ರೀ ವಿ ಡಿ ಕೆ ವಕೀಲರಿಂದ :**

ನಮ್ಮ ಕುಟುಂಬದಲ್ಲಿ ನಾನೇ ಕಿರಿಯ ಸದಸ್ಯನಾಗಿರುವೆನು ಎಂದರೆ ಸರಿ. ನಮ್ಮ ಕುಟುಂಬದಲ್ಲಿ ಹಿರಿಯ ಸದಸ್ಯರೆಂದರೆ ಪ್ರತಿವಾದಿ 3 ರವರು. ನಂತರ ಪ್ರತಿವಾದಿ 5 ರವರು, ನಂತರ ಪ್ರತಿವಾದಿ 4 ರವರು. ನಾನು ಪ್ರತಿವಾದಿ 5 ಇಬ್ಬರು ಕೂಡಿಯೇ ವಾಸವಾಗಿರುವೆವು. ನಿಪಿ 6 ರ ದಾಖಲೆಯ ಪ್ರಕಾರ ಕೇವಲ ಸರ್ವೆ ನಂಬರ್ 91/1, 91/5 ಹಾಗೂ 105/5 ಈ ಮೂರು ಆಸ್ತಿಗಳು ಮಾತ್ರ ನಮ್ಮ ಪೂರ್ವಜರಿಂದ ಬಂದ ಆಸ್ತಿಗಳು ಎಂದರೆ ಸರಿ. ಕಳೆದ 2-3 ವರ್ಷಗಳಿಂದ ಪ್ರತಿವಾದಿ 1 ರವರು ಪ್ರತ್ಯೇಕವಾಗಿ ವಾಸಿಸುತ್ತಿರುವರು. ಪ್ರತಿವಾದಿ 1 ರವರು ದಾವಾ ಆಸ್ತಿಗಳಿಗೆ ಪ್ರತಿವಾದಿ 2 ರವರ ಹೆಸರು ದಾಖಲು ಮಾಡಿಸಿದ ವಿಷಯ ನನಗೆ ಕಳೆದ 2 ವರ್ಷಗಳ ಹಿಂದೆ ಗೊತ್ತಾಗಿರುವುದು.

2. ಸರ್ವೆ ನಂಬರ್ 72 ವಿಸ್ತೀರ್ಣ 3 ಎಕರೆ 18 ಗುಂಟೆ ಜಮೀನು ನನ್ನ ತಂದೆ ಪ್ರತಿವಾದಿ 1 ರವರು ಗೋವಿಂದಪ್ಪ ಪೂಜಾರ್ ಇವರ ಕಡೆಯಿಂದ ಖರೀದಿ ಮಾಡಿರುವರು ಎಂದರೆ ಸರಿ. ಸರ್ವೆ ನಂಬರ್ 105/2 ವಿಸ್ತೀರ್ಣ 1 ಎಕರೆ 10 ಗುಂಟೆ ಜಮೀನನ್ನು ನನ್ನ ತಂದೆ ಪರಮೇಶ್ವರ್ ಎಂಬುವವರ ಮನೆತನದ ಕಡೆಯಿಂದ ಖರೀದಿ ಮಾಡಿರುವರು ಎಂದರೆ ಸರಿ. ಕನಸಗೇರಿ ಗ್ರಾಮದಲ್ಲಿ ನಮ್ಮ ಮನೆತನದ ಹೆಸರಿನಲ್ಲಿ ಮನೆಗಳ ಆಸ್ತಿಗಳು ಇರುವವು. ಆದರೆ

ಅವುಗಳಿಗೆ ಸಂಬಂಧಪಟ್ಟಂತೆ ದಾಖಲೆಗಳು ಲಭ್ಯ ಇರುವುದಿಲ್ಲ. ಈ ಗ್ರಾಮದಲ್ಲಿ ಆಸ್ತಿ ನಂ. 176 ವಿಸ್ತೀರ್ಣ 40*30 ಅಳತೆಯ ಬೈಲು ಜಾಗೆ ಪ್ರತಿವಾದಿ 1 ರವರ ಹೆಸರಿನಲ್ಲಿ ಇರುವುದು ಎಂದರೆ ಸರಿ.

3. ಈ ದಾವೆ ದಾಖಲು ಮಾಡಲು ವಕೀಲರಿಗೆ ನಾನೇ ಮಾಹಿತಿ ನೀಡಿರುವೆನು. ಈ ದಾವೆಯಲ್ಲಿ ನಮ್ಮ ಮನೆತನದ ಪಂಚಾಯಿತಿಯ ಆಸ್ತಿಗಳನ್ನು ದಾವಾ ಆಸ್ತಿಗಳಿಗೆ ಸೇರ್ಪಡೆ ಮಾಡಿರುವುದಿಲ್ಲ ಎಂದರೆ ಸರಿ, ಇವುಗಳ ದಾಖಲಾತಿ ಸಿಗದೇ ಇರುವುದರಿಂದ ಮಾಡಿರುವುದಿಲ್ಲ. ಪ್ರತಿವಾದಿ 5 ವಿನ ಹೆಂಡತಿಯ ಹೆಸರು ಲಕ್ಷ್ಮೀಬಾಯಿ ಎಂದರೆ ಸರಿ. ನಾನು ಮತ್ತು ನನ್ನ ಸಹೋದರ ಪ್ರತಿವಾದಿ 5 ಕಳೆದ 6 ತಿಂಗಳಿಂದ ನಾವು ಪ್ರತ್ಯೇಕವಾಗಿ ವಾಸಿಸುತ್ತಿರುವೆವು. ಪ್ರತಿವಾದಿ 5 ಮತ್ತು ಆತನ ಹೆಂಡತಿಯ ಹೆಸರಿನಲ್ಲಿ ಆಸ್ತಿಗಳು ಇದ್ದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಪ್ರತಿವಾದಿ 5 ವಿನ ಹೆಂಡತಿಯ ಹೆಸರಿನಲ್ಲಿ ದಾದನಟ್ಟಿ ಗ್ರಾಮದಲ್ಲಿ ಅವಳ ಹೆಸರಿನಲ್ಲಿ ಸರ್ವೇ ನಂಬರ್ 186 ವಿಸ್ತೀರ್ಣ 35 ಗುಂಟೆ ಜಮೀನನ್ನು ಪ್ರತಿವಾದಿ 5 ರವರು ಖರೀದಿ ಹಿಡಿದಿರುವ ಆಸ್ತಿ ಆಗಿರುವುದು ಎಂದರೆ ಸರಿ. ಈ ಆಸ್ತಿಯನ್ನು ದಾವಾ ಆಸ್ತಿಯನ್ನಾಗಿ ಸೇರ್ಪಡೆ ಮಾಡಿರುವುದಿಲ್ಲ ಎಂದರೆ ಸರಿ , ಈ ಆಸ್ತಿ ನಮಗೆ ಸಂಬಂಧಪಟ್ಟಿರುವುದಿಲ್ಲ.

4. ನನಗೆ ಈಗ 39 ವರ್ಷಗಳಾಗಿರುವವು. ನನ್ನ ಅಜ್ಜ ಮೃತ ಪಟ್ಟ ನಂತರ ಆತನ ಹೆಸರೇ ಪ್ರತಿವಾದಿ 5 ವಿಗೆ ನಾಮಕರಣ ಮಾಡಿರುವರು ಎಂದರೆ ಸರಿ.ನನ್ನ ಅಜ್ಜ ಮೃತ ಪಟ್ಟ 10 ವರ್ಷಗಳ ನಂತರ ಪ್ರತಿವಾದಿ 5 ರವರು ಜನ್ಮತಾಳಿರುವರು. ಪ್ರತಿವಾದಿ 2 ರವರು ನನ್ನ ತಾಯಿ ನನ್ನ ಜೊತೆ ಪೊಮ್ಮರ್ ಬುದ್ನಿ ಗ್ರಾಮದಲ್ಲಿ ವಾಸವಾಗಿರುವಳು ಎಂದರೆ ಸರಿ. ಸರ್ವೇ ನಂಬರ್ 72 ರ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಕಂದಾಯ ನ್ಯಾಯಾಲಯದಲ್ಲಿ ಆರ್ ಟಿ ಎಸ್ ಪ್ರಕರಣ ದಾಖಲಾಗಿತ್ತು ಎಂದರೆ ಸರಿ. ಆ ನ್ಯಾಯಾಲಯದಿಂದ ನನಗೆ ನೋಟಿಸ್ ಸಹ ಜಾರಿಯಾಗಿತ್ತು ಎಂದರೆ ಸರಿ. ಆ ಪ್ರಕರಣದಲ್ಲಿ ನಮ್ಮ ತಂದೆ ನಮಗೆ ಮಾಹಿತಿ ನೀಡದೆ ತಿಳಿಯಲಾರದೆ ಸಹಿ ಮಾಡಿ ಬಂದಿದ್ದರು, ಆ ಕಾರಣಕ್ಕಾಗಿ ಆ ಪ್ರಕರಣ ನಡೆದಿರುವುದು. ಈ ಆಸ್ತಿಯನ್ನು ಲೋಕಾಪುರದ ಬ್ರಹ್ಮಾನಂದ ಸ್ವಾಮಿಜಿ ಇರವರಿಗೆ ನೀಡಿದ್ದರು. ಈ ಸಂಗತಿ ನನ್ನ ವಾದ ಪತ್ರದಲ್ಲಿ ಹೇಳಿರುವುದಿಲ್ಲ, ಏಕೆಂದರೆ ಆ ಸಂಗತಿಯನ್ನು ನಾವು

ಸರಿಪಡಿಸಿಕೊಂಡಿರುವೆವು. ಈ ದಾವೆ ದಾಖಲು ಮಾಡಿದ ನಂತರ ಅದನ್ನು ಸರಿಪಡಿಸಿಕೊಂಡಿದ್ದೇವೆ ಎಂದರೆ ಸರಿ. ನನ್ನ ತಂದೆಯೂ ಸಹ ಕಂದಾಯ ನ್ಯಾಯಾಲಯದಲ್ಲಿ ಹಾಜರು ಇದ್ದು ಬ್ರಹ್ಮಾನಂದ ಸ್ವಾಮಿಜಿಯವರಿಗೆ ನೀಡಬೇಕಾಗಿರುವ ಹಣವನ್ನು ನೀಡಿದ್ದು ನಂತರ ಅವರು ಆ ಕಂದಾಯ ನ್ಯಾಯಾಲಯದಲ್ಲಿ ಹಾಜರು ಆಗದೇ ಇರುವುದರಿಂದ ಆ ಪ್ರಕರಣ ಸರಿಪಡಿಸಿಕೊಂಡಿರುವೆವು. ಆ ಸರಿಪಡಿಸಿಕೊಂಡಿರುವ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಾಖಲೆಗಳನ್ನು ಈ ಪ್ರಕರಣದಲ್ಲಿ ಹಾಜರು ಪಡಿಸಿರುವುದಿಲ್ಲ.

5. ನನ್ನ ತಂದೆಯನ್ನು ನಾವು ಈಗ ಪಾಲನೆ ಪೋಷಣೆ ಮಾಡುತ್ತಿರುವುದಿಲ್ಲ, ಆತ ಬಂದರೆ ಮಾಡುತ್ತೇವೆ. ನನ್ನ ತಂದೆಗೆ ಈಗ ಸುಮಾರು 70-80 ವರ್ಷಗಳು ಆಗಿರಬಹುದು. ಅವರು ಆರೋಗ್ಯವಾಗಿಯೇ ಇರುವರು. ದಾವಾ ಆಸ್ತಿ ಸರ್ವೇ ನಂಬರ್ 91/1, 91/5 ಹಾಗೂ 105/5 ಈ ಮೂರು ಆಸ್ತಿಗಳು ಮಾತ್ರ ನಮ್ಮ ಪೂರ್ವಜರ ಆಸ್ತಿಗಳು ಎಂದರೆ ಸರಿ. ಸರ್ವೇ ನಂಬರ್ 72 ಹಾಗೂ 105/2 ಈ ಎರಡು ಆಸ್ತಿಗಳು ಸಹ ನನ್ನ ಮತ್ತು ಉಳಿದ ಪ್ರತಿವಾದಿಯರ ಜಂಟಿ ಕುಟುಂಬದ ಆಸ್ತಿಗಳು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಈಗ ವಯಸ್ಸು ಬಹಳ ಆಗಿರುವುದರಿಂದ ಆತನ ಪಾಲನೆ ಪೋಷಣೆ ಮಾಡಲು ಯಾರು ಇರುವುದಿಲ್ಲ ಎಂದರೆ ಸರಿ. 2015 ರಲ್ಲಿ ಪ್ರತಿವಾದಿ 2 ರವರ ಹೆಸರಿನಲ್ಲಿ ಕುಟುಂಬದ ಆಸ್ತಿಗಳು ಹಕ್ಕು ಬದಲಾವಣೆ ಆದಾಗ ಅದನ್ನು ನಾವು ಎಲ್ಲಿಯೂ ಪ್ರಶ್ನಿಸಿರುವುದಿಲ್ಲ. ಕಳೆದ 30 ವರ್ಷಗಳಿಂದಲೂ ನನ್ನ ತಂದೆ ನಮ್ಮ ಜೊತೆ ವಾಸವಾಗಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂಬರ್ 72 ಮತ್ತು 105/2 ಈ ಎರಡು ಆಸ್ತಿಗಳು ಪ್ರತಿವಾದಿ 1 ರವರ ಸ್ವಂತ ದುಡಿಮೆಯಿಂದ ಸಂಪಾದನೆಯಿಂದ ಮಾಡಿರುವ ಆಸ್ತಿಗಳು ಎಂದರೆ ಸರಿಯಲ್ಲ. ಈ ಎರಡು ಆಸ್ತಿಗಳು ಸಹ ನನ್ನ ಮತ್ತು ಉಳಿದ ಪ್ರತಿವಾದಿಯರ ಮನೆತನದ ಜಂಟಿ ಆಸ್ತಿಗಳು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ನನ್ನ ಸಾಕ್ಷಿ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಬರೆಸಿ ಹಾಕಲು ವಕೀಲರಿಗೆ ನಾನೇ ಮಾಹಿತಿ ನೀಡಿರುವೆನು. ಸರ್ವೇ ನಂಬರ್ 105/2 ಈ ಜಮೀನನ್ನು ನನ್ನ ತಂದೆ 1998 ರಲ್ಲಿ ನೊಂದಾಯಿತ ಖರೀದಿ ಪತ್ರದ ಮೂಲಕ ರೂ. 33,500/- ಖರೀದಿ ಮಾಡಿರುವರು ಎಂದರೆ

ಸರಿ. ಸರ್ವೇ ನಂಬರ್ 72 ರ ಜಮೀನು 2004 ರಲ್ಲಿ ಪೂಜಾರ್ ಎಂಬುವವರ ಕಡೆಯಿಂದ ರೂ. 1 ಲಕ್ಷ 89 ಸಾವಿರಗಳಿಗೆ ಖರೀದಿ ಮಾಡಿರುವರು ಎಂದರೆ ಸರಿ. ಈ ಆಸ್ತಿಯನ್ನು ನಾವು ಎಲ್ಲರೂ ಕೂಡಿಯೇ ಪೂರ್ವಜರಿಂದ ಜಮೀನುಗಳಿಂದ ಬಂದ ಆದಾಯದಿಂದ ಖರೀದಿ ಮಾಡಿರುವೆವು.

7. ದಾದನಟ್ಟಿ ಗ್ರಾಮ ಪಂಚಾಯಿತಿಯ ಹಣಸಗೇರಿ ಗ್ರಾಮದ ಆಸ್ತಿ ನಂ. 176 ಸಂಬಂಧಪಟ್ಟಂತೆ ಕಾರ್ಯದರ್ಶಿ ಗ್ರಾಮ ಪಂಚಾಯಿತಿ ದಾದನಟ್ಟಿಯವರು ನೀಡಿರುವ 2024-25 ಸಾಲಿನ ಕರಗಳ ಆಕರಣೆಯ ದಾಖಲಾತಿಯನ್ನು ತೋರಿಸಲಾಗಿ ಆ ದಾಖಲೆಯ ಪ್ರಕಾರ ಸದರಿ ಅಸ್ತಿಯು ಪ್ರತಿವಾದಿ 1 ರವರ ಹೆಸರಿನಲ್ಲಿ ಇರುವುದನ್ನು ಒಪ್ಪಿಕೊಂಡಿರುವರು. ಪಂಚಾಯಿತಿಯವರು ದಾಖಲೆಗಳು ಇರುವುದಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾಖಲಾತಿ ನಿಜವಿರುವುದಿಲ್ಲ. ನಾನು ಮತ್ತು ನನ್ನ ಸಹೋದರ ಕೂಡಿಕೊಂಡು ಪ್ರತಿವಾದಿ 1 ರವರಿಗೆ ತೊಂದರೆ ನೀಡಲು ಈ ಸುಳ್ಳು ದಾವೆ ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ. ವಯಸ್ಸಾದ ಪ್ರತಿವಾದಿ 1 ರವರಿಗೆ ಸರಿಯಾಗಿ ಪಾಲನೆ ಪೋಷಣೆ ಮಾಡದೆ ಅವರಿಗೆ ತೊಂದರೆ ನೀಡುವ ಸಲುವಾಗಿ ಈ ಸುಳ್ಳು ದಾವೆ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 1 ರವರು ತಾವು ಸಂಪಾದನೆ ಮಾಡಿರುವ ಆಸ್ತಿ ನಂ. 72 ಮತ್ತು 105/2 ಮಾರಾಟ ಮಾಡುತ್ತಾರೆ ಎಂಬ ಕಾರಣಕ್ಕೆ ಅವರ ವಿರುದ್ಧ ಈ ಸುಳ್ಳು ದಾವೆ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

8. ಪ್ರತಿವಾದಿ 1 ರವರು ತಾವು ಸಂಪಾದಿಸಿರುವ ಆಸ್ತಿಗಳನ್ನು ಮಾತ್ರ ತೆಗೆದುಕೊಂಡು ಹೋಗಲು ತಯಾರು ಇರುವರು ಎಂದರೆ ಸಾಕ್ಷಿ ಇದಕ್ಕೆ ತನ್ನ ಒಪ್ಪಿಗೆ ಇರುವುದಿಲ್ಲ ಎಂದು ಉತ್ತರಿಸುವರು. ಪ್ರತಿವಾದಿ 1 ರವರು ಸ್ವ ಸಂಪಾದನೆ ಮಾಡಿರುವ ಆಸ್ತಿಗಳಿಗೆ ನಾನು ಮತ್ತು ಉಳಿದ ಪ್ರತಿವಾದಿಯರು ಸಾಮೂಹಿಕ ಕಬ್ಜೆದಾರರು ಇರುವರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 1 ರವರು ಈ ದಾವಾ ಆಸ್ತಿಗಳನ್ನು ಮಾರಾಟ ಮಾಡುತ್ತಾರೆ ಎಂದು ನಾನು ಸುಳ್ಳು ಹೇಳಿ ಈ ದಾವೆ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ದಾವೆ ದಾಖಲು ಮಾಡಿದ ನಂತರ ಸರ್ವೇ ನಂ. 72 ರ ಆಸ್ತಿಗೆ ಸಂಬಂಧಪಟ್ಟಂತೆ ನಾವೇ ಬದಲಾವಣೆ ಮಾಡಿದ್ದೇವೆ ಎಂದರೆ ಸರಿ. ಪ್ರತಿವಾದಿ 1 ರವರು

ತಮ್ಮ ಜಮೀನುಗಳನ್ನು ಮಾರಾಟ ಮಾಡಿಕೊಂಡು ಹೋಗುತ್ತಾರೆ ಎಂಬ ಕಾರಣಕ್ಕೆ ಆತನ ಮುಪ್ಪಾವಸ್ಥೆಯಲ್ಲಿ ಸರಿಯಾಗಿ ನೋಡಿಕೊಂಡು ಹೋಗದೆ ಇರುವುದರಿಂದ ಆತನ ಅಸ್ತಿಯನ್ನು ಕಬಳಿಸುವ ಸಲುವಾಗಿ ಈ ಸುಳ್ಳು ದಾವೆ ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ.

ಪ್ರತಿವಾದಿ 2 ರಿಂದ 5 ರವರನ್ನು ಮತ್ತು ಅವರ ವಕೀಲರನ್ನು ಕೂಗಿಸಲಾಯಿತು, ನ್ಯಾಯಾಲಯದಲ್ಲಿ ಹಾಜರು ಇರದ ಕಾರಣ ಅವರ ಪರವಾಗಿ ಯಾವುದೇ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

VIJAYAKUMAR KANNUR
Digitally signed by VIJAYAKUMAR KANNUR
Date: 2025.06.06 17:40:09 +0530

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ